(3) ದಿನಾಂಕ : 30-6-1993ಕ್ಕೆ ಚಾಲ್ತಿ ಮತ್ತು ಸುಸ್ತಿ ಸೇರಿದಂತೆ ಒಟ್ಟು ತಗಾದೆ 665.33 ಕೋಟಿ ರೂ. ಗಳಪೈಕಿ ಸುಸ್ತಿ ಮೊತ್ತ ರೂ. 340.27 ಕೋಟಿ (ಅಪೆಕ್ಸ್ ಬ್ಯಾಂಕ್ 224.44 ಕೋಟಿ, ಕಾಸ್ಕಾರ್ ಬ್ಯಾಂಕ್ 115.83 ಕೋಟಿ) ಹೀಗಾಗಿ ಸುಸ್ತಿ ಪ್ರಮಾಣ ಶೇಕಡಾ 51.14ರಷ್ಟು ಆಗುತ್ತದೆ. ಇದರ ಪರಿಣಾಮವಾಗಿ ಈ ಸಂಸ್ಥೆಗಳು ತಮ್ಮ ಸ್ವಂತ ಸಂಪನ್ಮೂಲದಿಂದ ಹಾಗೂ ಪುನರ್ಧನ ಸೌಲಭ್ಯದಿಂದ ಸಾಲ ನೀಡುವುದಕ್ಕೆ ಅಡಚಣೆ ಉಂಟಾಗುತ್ತದೆ. (ಶೇಕಡಾ 60ರಷ್ಟು ವಸೂಲಾತಿ ಸಾಧಿಸಿದ್ದರೆ ಮಾತ್ರ ಅನಿರ್ಬಂಧಿತ ಪುನರ್ಧನ ಸೌಲಭ್ಯ ಸಾಧ್ಯ). 19 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪೈಕಿ 9 ಬ್ಯಾಂಕುಗಳು ನಷ್ಟದಲ್ಲಿರುತ್ತದೆ. ಶಿವಮೊಗ್ಗ, ಮಂಡ್ಯ, ಹಾಸನ ಮತ್ತು ಚಿತ್ರದುರ್ಗ, ಈ 4 ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ನಬಾರ್ಡಿನ ಪುನರ್ಧನ ಸೌಲಭ್ಯಕ್ಕೆ ಅರ್ಹವಾಗಿರುವುದಿಲ್ಲ. 31-3-1992ಕ್ಕೆ ಕಾಸ್ಕಾರ್ಡ್ ಬ್ಯಾಂಕು 20.90 ಕೋಟಿ ರೂ. ನಷ್ಟದಲ್ಲಿರುತ್ತದೆ ಮತ್ತು ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು 15.70 ಕೋಟಿ ರೂ. ನಷ್ಟದಲ್ಲಿರುತ್ತದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು : ಪಿಕಾರ್ಡ್ ಬ್ಯಾಂಕುಗಳ ಇನ್ನೂ ಹೆಚ್ಚಿನ ನಷ್ಟದಲ್ಲಿರುತ್ತವೆ. ಒಟ್ಟಾರೆ ಸಹಕಾರಿ ಮತ್ತು ಸಂಸ್ಥೆಗಳ ಪರಿಸ್ಥಿತಿಯು ರಾಜ್ಯದಲ್ಲಿ ಉತ್ತಮ ರೀತಿಯಲ್ಲಿರುವುದಿಲ್ಲ.

(4) ಕರ್ನಾಟಕದಲ್ಲಿನ ಒಟ್ಟು 57.76 ಲಕ್ಷ ಕೃಷಿ ಕುಟುಂಬಗಳ ಪೈಕಿ 45.00 ಲಕ್ಷ ರೈತರ ಕೃಷಿ ಪತ್ತಿನ ಸಹಕಾರ ಸಂಘಗಳ ಸದಸ್ಯರಾಗಿರುತ್ತಾರೆ. ಈ ಪೈಕಿ ಸಾಲ ಪಡೆದ ರೈತರ ಸಂಖ್ಯೆ ಕೇವಲ 14 ಲಕ್ಷ ಅಂದರೆ ಸದಸ್ಯತ್ವ ಪಡೆದ ಶೇ.31ರಷ್ಟು ಮಾತ್ರ ಹಾಗೂ ಒಟ್ಟು ಕೃಷಿ ಕುಟುಂಬಗಳ ಶೇ.24ರಷ್ಟು ಮಾತ್ರ. ಹೀಗೆ ಸಾಲಪಡೆದ ರೈತರ ಪೈಕಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ಪಡೆದುಕೊಂಡ ಸಣ್ಣ ಮತ್ತು ಅತಿ ಸಣ್ಣ ರೈತರ ಅತಿ ಹೆಚ್ಚು ಸಂಖ್ಯೆ ಎಂದರೆ 4.41 ಲಕ್ಷ ಜನ ಮಾತ್ರ. ಇವರ ಪೈಕಿ 1.92 ಲಕ್ಷ ಜನರು ಮಾತ್ರ ಸುಸ್ತಿದಾರರಿರುತ್ತಾರೆ ಮತ್ತು 2.49 ಲಕ್ಷ ಜನರು ಚಾಲ್ತಿ ಸಾಲಗಾರರಾಗಿರುತ್ತಾರೆ. ಒಟ್ಟು 38.48 ಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತರ ಪೈಕಿ ಸಹಕಾರ ಸಂಘಗಳಿಂದ ಸಾಲ ಪಡೆದವರ ಪ್ರಮಾಣ ಶೇಕಡ 11.50 ರಷ್ಟಿರುತ್ತದೆ. ಆದುದರಿಂದ ಈ ಸಣ್ಣ ಮತ್ತು ಅತಿ ಸಣ್ಣ ರೈತರು ರಾಸಾಯನಿಕ ಗೊಬ್ಬರಗಳನ್ನು ಬಿತ್ತನೆ ಬೀಜಗಳನ್ನು ಕೊಂಡುಕೊಳ್ಳಲು ಅಗತ್ಯವಿರುವ ಕೃಷಿ ಸಾಲಗಳ ಬೇಡಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮತ್ತು ಸಕಾಲದಲ್ಲಿ ಸಹಕಾರ ಸಂಘ ಮತ್ತು ಇತರೆ ಸಂಸ್ಥೆಗಳಿಂದ ಒದಗಿಸಿಕೊಡಲು ನಾವು ಅನುವು ಮಾಡಿಕೊಡಬೇಕಾಗಿದೆ.

(5) ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ರಂಜಕ ಮತ್ತು ರಂಜಕ ಮಿಶ್ರಿತ ಗೊಬ್ಬರಗಳ ಪ್ರತಿ ಮೂಟೆಗೆ 75-00 ರೂ ಸಹಾಯಧನವನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಈಗಾಗಲೇ ನಾನು ಘೋಷಿಸಿದ್ದೇನೆ. ಇದು 1993-94ನೇ ಸಾಲಿಗೆ ಅನ್ವಯವಾಗುತ್ತಿದ್ದು ಈ ಬಾಬಿಗೆ ತಗಲುವ ಒಟ್ಟು ವೆಚ್ಚ 27.50 ಕೋಟಿ ರೂ.ಗಳಾಗಿರುತ್ತದೆ. ಇದು ಕೇಂದ್ರ ಸರ್ಕಾರವು ನೀಡಿರುವ ವಿಶೇಷ ಗೊಬ್ಬರ ರಿಯಾಯಿತಿ ಯೋಜನೆಯಿಂದ ಹೊರತು ಆದುದಾಗಿರುತ್ತದೆ. ಕೇಂದ್ರ

ಸರ್ಕಾರದ ಈ ಯೋಜನೆಯು 31-3-1993ರವರೆಗೆ ಜಾರಿಯಲ್ಲಿದ್ದು, ಇದರ ವೆಚ್ಚ 17-53 ಕೋಟಿ ರೂ.ಗಳಾಗಿರುತ್ತದೆ. ಇದರ ಜೊತೆಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕಡಿಮೆ ಬಡ್ಡಿ ಧರದಲ್ಲಿ ಸಾಲ ಸಿಗುವಂತೆ ಆಗಲು ಹಾಗೂ ಅವರು ಸಾಲಗಳನ್ನು ಗಡುವು ದಿನಾಂಕದೊಳಗಾಗಿ ಮರುಪಾವತಿ ಮಾಡುವ ಪ್ರವೃತ್ತಿಯನ್ನು ಅವರಲ್ಲಿ ಮೂಡಿಸಲು ಶೇ.5ರ ಬಡ್ಡಿ ದರಕ್ಕೆ ಸಮನಾದ 5.00 ಕೋಟಿ ರೂ. ವೆಚ್ಚವಾಗಲಿರುವ ಉತ್ಪಾದನಾ ಉತ್ತೇಜಕ ಯೋಜನೆಯನ್ನು ನಾನು ಘೋಷಿಸಿದ್ದೇನೆ. ಇದರ ಜೊತೆಗೆ ಕೆಲವು ಪ್ರಮಾಣೀಕೃತ ಬಿತ್ತನೆ ಬೀಜಗಳನ್ನು ಬಳಸುವುದರಿಂದ ಒಂದು ಹೆಕ್ಟರಿಗೆ 500-00 ರೂ.ಗಳಿಗಿಂತಲು ಹೆಚ್ಚು ವೆಚ್ಚ ತಗಲುವ ಸಂದರ್ಭಗಳಲ್ಲಿ ಅಂತಹ ಬಿತ್ತನೆ ಬೀಜ ಮಾರಾಟ ಬೆಲೆಯ ಶೇ.50 ರಷ್ಟನ್ನು ವಿಶೇಷ ಸಹಾಯಧನವಾಗಿ ಭರಿಸಿ ಕೊಡಲಾಗುತ್ತದೆ. ಇದಕ್ಕೆ ತಗಲುವ ಒಟ್ಟು ವೆಚ್ಚ 2.00 ಕೋಟಿ ರೂ.ಗಳಾಗಿದ್ದು ಇದನ್ನು ಕೂಡಾ ಘೋಷಿಸಲಾಗಿದೆ.

ಶ್ರೀ ಈಶ್ವರಪ್ಪ : ರೈತರಿಗೆ ಏನೋ ಅನುಕೂಲ ಮಾಡಿಕೊಡಬಹುದೆಂದು ಬೆಳಿಗ್ಗೆಯಿಂದ ಕಾಯುತ್ತಿದ್ದೇವೆ. ಭಿಕ್ಷೆ ಕೊಟ್ಟ ಹಾಗೆ 5 ಪರ್ಸೆಂಟ್ ಕೊಟ್ಟಿದ್ದೀರಿ ಹಾಗೂ ಬಿಡುತ್ತೇವೆಂದು ಹೇಳಿ.

(6) ರೈತರಿಗೆ ನೀಡಲಾಗುವ ಹೆಚ್ಚುವರಿ ರಿಯಾಯತಿಗಳು:

ರೈತರಿಗೆ ನೀಡಲಾಗಿರುವ ವಿಶೇಷ ರಿಯಾಯತಿಗಳನ್ನು ಗಮನದಲ್ಲಿಟ್ಟು ಕೊಂಡು, ಮಾನ್ಯ ಸದಸ್ಯರು ನೀಡಿರುವ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಪ್ರವಾಹದಿಂದ ಉಂಟಾದ ಹಾವಳಿಯಿಂದ ಬೆಳೆ ನಾಶವಾಗಿರುವುದು ಹಾಗೂ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಮತ್ತು ಬೀದರ ಜಿಲ್ಲೆಯಲ್ಲಿ ಅಲ್ಪ ಪ್ರಮಾಣದಲ್ಲಿ ತೊಗರಿ ಬೆಳೆ ನಾಶವಾಗಿರುವುದನ್ನು ಗಮನದಲ್ಲಿಟ್ಟುಕೊಂಡು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡಲಾಗಿರುವ ಸೌಲಭ್ಯಗಳ ವ್ಯಾಪ್ತಿಯನ್ನು ಈ ಕೆಳಗಿನಂತೆ ಇನ್ನೂ ವಿಸ್ತೃತಗೊಳಿಸಬೇಕೆಂಬುದಾಗಿ ಸರ್ಕಾರವು ನಿರ್ಧರಿಸುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಏಕೆ ಓದುತ್ತೀರಿ ಬಿಡಿ ಸ್ವಾಮಿ ನಿಮಗೆ ಎಲ್ಲರ ಬಗ್ಗೆ ಅನುಕಂಪವಿದೆ. ನಿಮಗೆ ಅಧಿಕಾರ ಕೊಟ್ಟಂತಹ ಗ್ರಾಮೀಣ ರೈತರ ಬಗ್ಗೆ ಅನುಕಂಪ ಇಲ್ಲ. ಅತಿವೃಷ್ಟಿಗೆ ನೆರೆ ಹಾವಳಿಗೆ ಸಿಕ್ಕಂತಹ ಜನರಿಗೆ ಅನುಕೂಲ ಮಾಡಿಕೊಡಲಿಕ್ಕೆ ತಯಾರಿಲ್ಲ ನೀವು ಕೊಟ್ಟಂತಹ ಭರವಸೆಗೆ ದ್ರೋಹ ಮಾಡಿದ್ದೀರಿ.

<u>1. ಸಣ್ಣ ಮತ್ತು ಅತಿ ಸಣ್ಣ ರೈತರು ಪತ್ತಿನ ಸಹಕಾರ ಸಂಘಗಳಿಗೆ ಬಾಕಿಗಳನ್ನು ಮರುಪಾವತಿ ಮಾಡುವುದರ ಬಗ್ಗೆ.</u>

ಹಿಂದೆ ರೂಪಿಸಲಾಗಿದ್ದ ಕೃಷಿ ಉತ್ಪಾದನಾ ಉತ್ತೇಜಿತ ಯೋಜನೆಯು ಅಂದರೆ ಚಾಲ್ತಿ ಮತ್ತು ಸುಸ್ತಿ ಸಾಲಗಳನ್ನು ಸಂಪೂರ್ಣವಾಗಿ ಬಡ್ಡಿಯೊಂದಿಗೆ

ಮರುಪಾವತಿ ಮಾಡಿದರೆ ಬಡ್ಡಿದರದ ಶೇಕಡಾ 5ರಷ್ಟನ್ನು ಭರಿಸಿ ಕೊಡಲಾಗುತ್ತದೆ. ಯೋಜನೆಯು 31-7-1992ಕ್ಕೆ ಅಂತ್ಯಗೊಂಡಿತ್ತು. ಇದನ್ನು ವಿಶೇಷ ಪ್ರಕರಣವಾಗಿ 1-8-1992ರಿಂದ 30-6-1993 ರವರೆಗೆ ವಿಸ್ತರಿಸಲಾಗುವುದು. ಆದರೆ ಇದು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಮಾತ್ರ ಅನ್ವಯ ಆಗತಕ್ಕದ್ದು. (ಸಣ್ಣ ಮತ್ತು ಅತಿ ಸಣ್ಣ ರೈತರೆಂಬುದಕ್ಕೆ ಐ.ಆರ್.ಡಿ.ಪಿ. ವ್ಯಾಖ್ಯೆ ಅನ್ವಯ ಆಗತಕ್ಕದ್ದು. ಉಳಿದ ಷರತ್ತುಗಳು ಹಿಂದಿನಂತೆಯೇ ಇರತಕ್ಕದ್ದು. ಇದು ಅಂತಿಮವಾಗಿ ವಿಸ್ತರಿಸಲಾದ ಸೌಲಭ್ಯ ಆಗಿರುತ್ತದೆ. ಆದುದರಿಂದ ಮಾನ್ಯ ಸದಸ್ಯರುಗಳು ಸಣ್ಣ ಮತ್ತು ಅತಿ ಸಣ್ಣ ರೈತರ ಮನ ಒಲಿಸಿ ಅವರು ಸಹಕಾರ ಸಂಘಗಳಿಗೆ ತಮ್ಮ ಸುಸ್ತಿ ಚಾಲ್ತಿ ಸಾಲಗಳನ್ನು ಮರುಪಾವತಿ ಮಾಡಿ ಈ ರಿಯಾಯತಿಯ ಹೆಚ್ಚಿನ ಲಾಭವನ್ನು ಪಡೆದುಕೊಳ್ಳಲು ಪ್ರೇರೇಪಿಸಲು ವಿನಂತಿಸಲಾಗಿದೆ. ತಗಾದೆಯ ಶೇಕಡ 70ರಷ್ಟು ವಸೂಲಾಗಬಹುದೆಂದು ನಿರೀಕ್ಷಿಸಿದರೆ ಈ ರಿಯಾಯತಿಯಿಂದಾಗಿ ಸರ್ಕಾರವು ರೂ.12.00 ಕೋಟಿಗಳ ವೆಚ್ಚ ಭರಿಸಬೇಕಾಗಬಹುದು.

2. ಪ್ರವಾಹ ಪೀಡಿತ ಪ್ರದೇಶಗಳ ರಿಯಾಯತಿಗಳು.

1992-93ನೇ ಸಾಲಿನಲ್ಲಿ ಪ್ರವಾಹ ಪೀಡಿತ ಪ್ರದೇಶಗಳೆಂಬುದಾಗಿ ಕಂದಾಯ ಇಲಾಖೆಯು ಅಧಿಸೂಚನೆ ಮಾಡಿದ ಪ್ರದೇಶಗಳಲ್ಲಿನ ರೈತರ ಅನುಕೂಲಕ್ಕೆ ಬಡ್ಡಿ ದರದ ಶೇ.5ರಷ್ಟು ರಿಯಾಯತಿಗಳನ್ನು ಕೃಷಿ ಉತ್ಪಾದನಾ ಉತ್ತೇಜಕವಾಗಿ ನೀಡಲಾಗುವುದು. ಇದನ್ನು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಅಷ್ಟೇ ಅಲ್ಲದೆ ಎಲ್ಲಾ ವರ್ಗದ ರೈತ ಸದಸ್ಯರಿಗೂ ಸಹ ನೀಡಲಾಗುವುದು. ಈ ಯೋಜನೆಯ ಸೌಲಭ್ಯವು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ರೈತರು ಸಹಕಾರ ಸಂಘಗಳಿಂದ ಪಡೆದುಕೊಂಡ ಸಾಲಗಳು 1-7-1992 ರಿಂದ 30-6-1993ರ ಅವಧಿಯಲ್ಲಿ ಮರು ಪಾವತಿ ಮಾಡಲ್ಪಟ್ಟ ಸಾಲಗಳಿಗೆ ಅನ್ವಯ ಆಗುತ್ತದೆ.

ಈ ರಿಯಾಯತಿಯಿಂದಾಗಿ ಸರ್ಕಾರವು ಸುಮಾರು 2.50 ಕೋಟಿ ರೂ. ವೆಚ್ಚ ಭರಿಸಬೇಕಾಗಬಹುದು.

3. 1992ರ ಮುಂಗಾರು ಹಂಗಾಮಿನಲ್ಲಿ ತೊಗರಿ ಬೆಳೆಗೆ ಅತಿ ಹೆಚ್ಚಿನ ಪ್ರಮಾಣದಲ್ಲಿ ಹಾನಿ ಉಂಟಾದ ತಾಲ್ಲೂಕುಗಳ ರಿಯಾಯತಿಗಳು.

ಮಾನ್ಯ ಸದಸ್ಯರುಗಳಿಗೆ ತಿಳಿದಿರುವಂತೆ 1992ರ ಮುಂಗಾರು ಹಂಗಾಮಿನಲ್ಲಿ ತೊಗರಿ ಬೆಳೆಗೆ ಕೊರೆಯುವ ಹುಳ ತಗುಲಿದ್ದರಿಂದ ಇಡೀ ಗುಲ್ಬರ್ಗಾ ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಮತ್ತು ಬೀದರ್ ಹಾಗೂ ರಾಯಚೂರು ಜಿಲ್ಲೆಗಳ ವಿವಿಧ ತಾಲ್ಲೂಕುಗಳಲ್ಲಿ ಸ್ವಲ್ಪ ಪ್ರಮಾಣದಲ್ಲಿ ನಷ್ಟ ಉಂಟಾಗಿರುತ್ತದೆ. 1992ರ ಮುಂಗಾರು ಹಂಗಾಮಿನಲ್ಲಿ ತೊಗರಿ ಬೆಳೆ ಬೆಳೆಯಲ್ಪಟ್ಟಿದ್ದ ಒಟ್ಟು ಪ್ರದೇಶ 3.36 ಲಕ್ಷ ಹೆಕ್ಟೇರುಗಳು ಎಂಬುದಾಗಿ ವರದಿ ಮಾಡಲಾಗಿರುತ್ತದೆ. ಜನರಲ್, ಇನ್ಷೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಇವರಿಂದ ತಿಳಿದು ಬಂದಿರುವಂತೆ 1992ರ ಮುಂಗಾರು ಹಂಗಾಮಿನಲ್ಲಿ 15620 ಜನ ರೈತರು 28243

ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಬೆಳೆಯಲು ವಿವಿಧ ಸಂಸ್ಥೆಗಳಿಂದ ಸಾಲ ಪಡೆದುಕೊಂಡು ಒಟ್ಟು 5.50 ಕೋಟಿ ರೂ.ಗಳವರೆಗೆ ವಿಮೆ ಮಾಡಿಸಿದ್ದರು. ತೊಗರಿ ಬೆಳೆ ಹೆಚ್ಚಿನ ಪ್ರಮಾಣದಲ್ಲಿ ನಾಶವಾದ ತಾಲ್ಲೂಕುಗಳಲ್ಲಿ 1992ರ ಮುಂಗಾರ್ ಬೆಳೆ ಇಳುವರಿಯು ಕ್ರಾಪ್ ಕಟಿಂಗ್ ಪ್ರಯೋಗದ ಪ್ರಕಾರ ಕನಿಷ್ಠ ಇಳುವರಿಗಿಂತಲೂ ಕಡಿಮೆ ಎಂಬುದಾಗಿ ನಿರ್ಧರಿಸಲಾದ ಪ್ರದೇಶಗಳಲ್ಲಿನ ರೈತರು ಜನರಲ್ ಇನ್ಸೂರೆನ್ಸ್ ಕಂಪನಿಯಿಂದ ನಷ್ಟಕ್ಕೆ ಸಮಾನವಾದ ಪರಿಹಾರ ಮತ್ತು ವಿಮೆ ಮೊತ್ತ ಇವುಗಳಿಗೆ ಅರ್ಹರಾಗಿರುತ್ತಾರೆ. ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ತೊಗರಿ ಬೆಳೆಯು ಗುರುತಿಸಲ್ಪಟ್ಟ ಪ್ರದೇಶದಲ್ಲಿನ ರೈತರಿಗೆ ವಿಶೇಷ ರಿಯಾಯಿತಿ ನೀಡಲು ಸರ್ಕಾರ ಉದ್ದೇಶಿಸಿರುತ್ತದೆ. ಸರಾಸರಿ ಬೆಳೆ ಇಳುವರಿ ಪ್ರಮಾಣಕ್ಕಿಂತ ಬೆಳೆ ಹಾನಿಯ ಪ್ರಮಾಣ ಶೇಕಡ 50 ಕ್ಕಿಂತಲೂ ಹೆಚ್ಚಾಗಿದ್ದ ಪಕ್ಷದಲ್ಲಿ 1992ರ ಮುಂಗಾರು ಹಂಗಾಮಿನಲ್ಲಿ ಪ್ರತಿ ರೈತ ಬಿತ್ತನೆ ಮಾಡಿದ ಪ್ರತಿ ಎಕರೆಗೆ ರೂ. 500-00 ಪ್ರಕಾರ ವಿಶೇಷ ಸಹಾಯಧನ ನೀಡಲಾಗುತ್ತದೆ. ಆದರೆ ಅಂತಹ ರೈತರು ಬೆಳೆ ವಿಮಾ ಯೋಜನೆಯ ಪರಿಹಾರಕ್ಕೆ ಅರ್ಹರಾಗುವುದಿಲ್ಲ.

7. ಈ ವಿಶೇಷ ಸಹಾಯಧನ ಯೋಜನೆ ಬಾಬಿಗೆ ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿನ ರೈತರಿಗೆ ಸಹಾಯಧನ ಯೋಜನೆಯನ್ನು ತೊಗರಿ ಬೆಳೆ ನಷ್ಟ ಹೊಂದಿದ ರೈತರಿಗೆ ಅನ್ವಯ ಜಾರಿಗೊಳಿಸಬೇಕಾದರೆ ಸುಮಾರು 10 ಕೋಟಿ ರೂ.ಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ.

8. ಈ ಸಂದರ್ಭದಲ್ಲಿ ಈ ಗೌರವಾನ್ವಿತ ಸದನದ ಮುಂದೆ ಹೇಳಲಿಚ್ಚಿಸುವುದೇನೆಂದರೆ, ಸಾಲ ಮನ್ನಾ ಬಡ್ಡಿ ರಿಯಾಯಿತಿ ಇವುಗಳನ್ನು ಜಾರಿಗೊಳಿಸಬಾರದೆಂಬುದಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಸಬಾರ್ಡ್ ಸಂಸ್ಥೆ ಸಲಹೆ ನೀಡುತ್ತಾ ಬಂದಿರುತ್ತದೆ. ಆದುದರಿಂದ ಈ ಬಗ್ಗೆ ಕೈಗೊಳ್ಳುವ ತೀರ್ಮಾನಗಳು ಭಾರತೀಯ ರಿಜರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರ ರೂಪಿಸಿರುವ ಕೃಷಿ ಪತ್ತಿನ ವ್ಯವಸ್ಥೆಯನ್ನು ಅಸ್ತವ್ಯಸ್ತ ಮಾಡಿದಂತಾಗುತ್ತದೆ. ಆದುದರಿಂದ ಈಗ ಘೋಷಿಸಲಾಗಿರುವ ರಿಯಾಯಿತಿಗಳು ಏಕ ಮಾತ್ರ ಕಾಲಕ್ಕೆ ನೀಡಲಾದ ಸೌಲಭ್ಯಗಳಾಗಿರುತ್ತವೆ. ಕಂಡಿಕೆ 6(1) ಮತ್ತು 6(11) ರಲ್ಲಿ ಘೋಷಿಸಲಾಗಿರುವ ರಿಯಾಯಿತಿಗಳನ್ನು ಕೃಷಿ ಉತ್ಪಾದಕ ಉತ್ತೇಜಿಕ ಯೋಜನೆಯ ಮೂದರಿಯಲ್ಲಿಯೇ ಜಾರಿಗೆ ತಂದು ಸಹಕಾರ ಇಲಾಖೆಯ ಅಧಿಕಾರಿಗಳು ಇದನ್ನು ಅನುಷ್ಠಾನಕ್ಕೆ ತರತಕ್ಕದ್ದು. ಸರ್ಕಾರವು ಸ್ಪಷ್ಟವಾಗಿ ಹೇಳಲಿಚ್ಚಿಸುವುದೇನೆಂದರೆ ಸಹಕಾರ ಸಂಘ : ಬ್ಯಾಂಕುಗಳ ಸಾಲಗಳನ್ನು ಯಾವುದೇ ವರ್ಗದ ರೈತರಿಗೂ ಮನ್ನಾ ಮಾಡುವ ಯೋಚನೆ ಇರುವುದಿಲ್ಲ. ಏಕೆಂದರೆ ಸಾಲ ಮನ್ನಾವು ಪತ್ತು ವ್ಯವಸ್ಥೆಯ ಶಿಸ್ತಿಗೆ ವಿರುದ್ಧವಾದುದಾಗಿರುತ್ತದೆ. ಅಲ್ಲದೇ ಸಹಕಾರ ಬ್ಯಾಂಕಿಂಗ್ ಸಂಸ್ಥೆಗಳ ಆರೋಗ್ಯದಾಯಕ ಬೆಳವಣಿಗೆಗೆ ಕುಂಠಿತವಾಗುತ್ತದೆ.

ಈ ತೀರ್ಮಾನಗಳು ರೈತರಿಗೆ ಸಕಾಲದಲ್ಲಿ ಸಾಕಷ್ಟು ಸಾಲ ಒದಗಿಸುವುದಕ್ಕೆ ಅಡಚಣೆ ಉಂಟು ಮಾಡುವುದಲ್ಲದೇ ಈ ಹಿಂದೆ ನೀಡಲಾದ ಸಾಲ ಮರು ಪಾವತಿ ಆಗಿ ಗ್ರಾಮೀಣ ಪ್ರದೇಶದ ಸಣ್ಣ ಮತ್ತು ಅತಿ ಸಣ್ಣ ರೈತರ ಸಾಲದ ಅವಶ್ಯಕತೆಯನ್ನು

ಪೂರೈಸಲು ತೊಂದರೆ ಆಗುತ್ತದೆ. ಆದುದರಿಂದ ಈ ಸದನದ ಎರಡು ಬದಿಯ ನನ್ನ ಶಾಸಕ ಮಿತ್ರರನ್ನು ಈ ಯೋಜನೆಯನ್ನು ಸುಗಮವಾಗಿ ಕಾರ್ಯ ರೂಪಕ್ಕೆ ತರುವ ದಿಸೆಯಲ್ಲಿ ಸರ್ಕಾರದೊಂದಿಗೆ ಸಹಕರಿಸಬೇಕೆಂಬುದಾಗಿ ವಿನಂತಿಸುತ್ತೇನೆ. ತನ್ಮೂಲಕ ಅವಶ್ಯಕವಿರುವ ರೈತರು ಇದರ ಪೂರ್ಣ ಉಪಯೋಗವನ್ನು ಪಡೆದುಕೊಳ್ಳಬಹುದು ಮತ್ತು ಮುಂಬರುವ ತಿಂಗಳುಗಳಲ್ಲಿ ಸಾಲ ವಸೂಲಾಗಿ ಹೆಚ್ಚಿನ ಚಾಲನೆ ದೊರಕುವುದು.

7.25 ಪಿ.ಎಂ.

ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಇವತ್ತು ನನಗೆ ಬಹಳ ಆಶ್ಚರ್ಯವಾಗಿದೆ. ಏಕೆಂದರೆ, ನಾವೆಲ್ಲರೂ ಅಂದರೆ ಅದು ಬಿ.ಜೆ.ಪಿ.ಯವರು ಇರಬಹುದು, ಜನತಾದಳದವರು ಇರಬಹುದು, ರೈತ ಸಂಘದವರು ಇರಬಹುದು, ಎಸ್.ಜೆ.ಪಿ. ಇರಬಹುದು ಅಥವಾ ಮಾನ್ಯ ವಾಟಾಳ್ ನಾಗರಾಜ್‌ರವರು ಇರಬಹುದು, ನಾವೆಲ್ಲರೂ ಸೇರಿ ಅನೇಕ ಸಾರಿ ತಮ್ಮಲ್ಲಿ ವಿನಂತಿ ಮಾಡಿಕೊಂಡು ಬಂದಿದ್ದೇವೆ. ಸಾಲ ಮನ್ನಾ ಬಗ್ಗೆ ನಾವು ಇವತ್ತು ಇಲ್ಲಿ ಮಾತನಾಡುವುದಿಲ್ಲ. ರೈತರಿಗೆ ಬಡ್ಡಿ, ಚಕ್ರ ಬಡ್ಡಿ ವಸೂಲಾತಿಯ ಬಗ್ಗೆ ವಿನಾಯಿತಿ ಕೊಡಿ. ಸ್ಮಾಲ್ ಫಾರ್ಮರ್, ಮಾರ್ಜಿನಲ್ ಫಾರ್ಮರ್, ಬಿಗ್ ಫಾರ್ಮರ್ ಎಂದು ತಾರತಮ್ಯ ಮಾಡಬೇಡಿ. ರೈತ ಎಂದರೆ ಎಲ್ಲರೂ ರೈತರು. ಎಲ್ಲರಿಗೂ ಇದರಲ್ಲಿ ವಿನಾಯಿತಿ ಕೊಡಿ ಎಂದು ; ಇವತ್ತು ರೈತ ಏನು ಕಷ್ಟದಲ್ಲಿದ್ದಾನೆ ಇವನು ಹಿಂದೆಂದೂ ಕೂಡ ಇಷ್ಟೊಂದು ಕಷ್ಟದಲ್ಲಿ ಸಿಕ್ಕಿರಲಿಲ್ಲ. ಹೇಗೆಂದರೆ, ಒಂದು ಕಡೆ ಬರಗಾಲ, ಇನ್ನೊಂದು ಕಡೆ ನೆರೆ ಹಾವಳಿ, ಮತ್ತೊಂದು ಕಡೆ ಅಲ್ಪಸ್ವಲ್ಪ ಬೆಳೆ ಬಂತು, ಅದಕ್ಕೆ ಬೆಲೆ ಇಲ್ಲದಂತಾಗಿದೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ಬೈರೇಗೌಡರು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಇವತ್ತು ರೈತರು ಕಂಗಾಲಾಗಿದ್ದಾರೆ, ಬಹಳ ಕಷ್ಟದಲ್ಲಿದ್ದಾರೆ. ಆದರೆ ತಾವು ಹೇಳುತ್ತಿದ್ದೀರಿ. ನಮ್ಮ ಸರ್ಕಾರ ರೈತರ ಪರವಾಗಿದೆ, ರೈತರು ನಮ್ಮ ಪಕ್ಷದ ಬೆನ್ನೆಲುಬು, ಅವರಿಗೆ ನಾವು ಏನು ಬೇಕಾದರೂ ಮಾಡುವುದಕ್ಕೆ ಸಿದ್ಧವಾಗಿದ್ದೇವೆ ಎಂದು ಹೇಳುತ್ತಿದ್ದವರು ಇವತ್ತು ಈ ಬಡ ರೈತರಿಗೆ ಕೊಟ್ಟಿರುವುದನ್ನು ನೋಡಿದರೆ ಇದು ನನಗೆ ಬಹಳ ಆಶ್ಚರ್ಯವಾಗುತ್ತದೆ. ನಾವು ನಿಮ್ಮಿಂದ ಬಹಳಷ್ಟನ್ನು ಅಪೇಕ್ಷೆ ಮಾಡಿದೆವು. ನಾವು ಸಂಪನ್ಮೂಲಗಳನ್ನು ಕ್ರೋಢೀಕರಿಸುತ್ತಿದ್ದೇವೆ. ಮುಂದಿನ ವರ್ಷ ಸೇಲ್ಸ್ ಟ್ಯಾಕ್ಸ್‌ನಿಂದ ಸಾವಿರಾರು ಕೋಟಿ ರೂ. ಸರ್ಕಾರಕ್ಕೆ ಬರುತ್ತದೆ, ನಾವು ಅನುಕೂಲ ಮಾಡಿ ಕೊಡುತ್ತೇವೆಂದು ತಾವು ಭರವಸೆಯನ್ನೂ ಕೊಟ್ಟಿರಿ. ಆದರೆ ಇವತ್ತು ಈ ನಿಮ್ಮ ಸ್ಟೇಟ್‌ಮೆಂಟ್‌ನಲ್ಲಿ ರೈತರಿಗೆ ಒಂದು ಪೈಸೆ ಕೂಡ ವಿನಾಯಿತಿ ಕೊಟ್ಟಿಲ್ಲ. ಸ್ವಾಮಿ, ಹಿಂದೆ ನಾನೂ ಕೂಡ ವ್ಯವಸಾಯ ಮಂತ್ರಿಯಾಗಿದ್ದೆ. ನನಗೆ ಗೊತ್ತಿದೆ. ಕಳೆದ 10 ವರ್ಷಗಳಿಂದ ನಮ್ಮ ರಾಜ್ಯಕ್ಕೆ ಕೇಂದ್ರದಿಂದ ಬಂದಿರತಕ್ಕ ಕ್ರಾಪ್ ಇನ್‌ಷ್ಯೂರೆನ್ಸ್ ಹಣ ಒಂದು ಕೋಟಿ ರೂ. ಕೂಡ ಇಲ್ಲ. ಕ್ರಾಪ್ ಇನ್‌ಷ್ಯೂರೆನ್ಸ್ ಹಣ ಬರುತ್ತದೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬಹುದು. ಆದರೆ ಒಂದು ಪೈಸೆ ಕೂಡ ಬರುವುದಿಲ್ಲ. ಇದರಿಂದಾಗಿ ರೈತರಿಗೆ ತಮ್ಮಿಂದ ಬಹಳ ದೊಡ್ಡ ಮೋಸವಾಗಿದೆ. ಇವತ್ತು ಏನು ತಾವು ಈ ಹೇಳಿಕೆಯನ್ನು ಕೊಡುತ್ತಿದ್ದೀರಿ ಇದನ್ನು ಕೊಡುವುದಕ್ಕೆ ಇಷ್ಟು ದಿವಸ ಏತಕ್ಕೆ ನೀವು ತೆಗೆದುಕೊಂಡಿರಿ? ಇಷ್ಟು ದಿವಸ ನೀವು ತೆಗೆದುಕೊಳ್ಳಬೇಕಾದ ಅವಶ್ಯಕತೆ ಇರಲಿಲ್ಲ. ಈ ಹಿಂದೆ ತಾವು ನಮ್ಮನ್ನೆಲ್ಲಾ ಕರೆದು ಸಮಾಲೋಚನೆ

ಮಾಡಿ ಏನೋ ಹೇಳಿದಿರಿ. ಮಾನ್ಯ ಖಿಂಡ್ರೆಯವರೂ ಕೂಡ ತಾವು ಏನೋ ಸಲಹೆ ಕೊಡುತ್ತೇನೆಂದು ಹೇಳಿದ್ದರು. ತಾವು ಬಡ್ಡಿಯನ್ನಾದರೂ ವಿನಾಯಿತಿ ಕೊಡುತ್ತೀರೆಂದು ನಾನು ತಿಳಿದಿದ್ದೆ. ತಮಗೆ ಹೇಳುವುದಾದರೆ, ಹಿಂದೆ ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಅಂದರೆ ನಮ್ಮ ಸರ್ಕಾರ ಬಹಳ ಕಷ್ಟದಲ್ಲಿತ್ತು. 5 ವರ್ಷಕಾಲ ಬರಗಾಲ ದೇಶದಲ್ಲಿತ್ತು, ಆಗ ನಮ್ಮ ಸರ್ಕಾರಕ್ಕೆ ಬಹಳ ಕಷ್ಟವಿತ್ತು. ತಮಗೂ ಕೂಡ ಗೊತ್ತಿರಬಹುದು, ತಾವು ನಮ್ಮ ಸರ್ಕಾರವನ್ನು ಆವತ್ತು ಬಹಳವಾಗಿ ಅಟ್ಯಾಕ್ ಮಾಡಿದ್ದೀರಿ. ಸರ್ಕಾರವನ್ನು ದಿವಾಳಿ ತೆಗೆದರು ಎಂದು ತಾವು ಹೇಳಿದಿರಿ. ಆದರೆ ನಾವು ಆವತ್ತು ರಾಜ್ಯದ ರೈತರಿಗೆ ಯಾವುದೇ ರೀತಿಯಲ್ಲೂ ಮೋಸ ಮಾಡಿಲ್ಲ. ಒಂದು ವರ್ಷಕಾಲ ರೈತರ ಬಡ್ಡಿಯನ್ನು ಮನ್ನಾಮಾಡದೆವು. ಚಕ್ರಬಡ್ಡಿಯನ್ನು ಮನ್ನಾಮಾಡಿದೆವು. ಆದರೆ ಇವತ್ತು ನೀವು ಅವರಿಗೆ ಏನು ಅನುಕೂಲ ಮಾಡಿ ಕೊಟ್ಟಿದ್ದೀರಿ? ಪ್ಲಾನಿಂಗ್ ಕಮಿಷನ್ ಕಡೆಯಿಂದ ಒಳ್ಳೆಯ ಸರ್ಟಿಫಿಕೇಟನ್ನು ತಂದಿರಿ. ಇವರು ಫೈನಾನ್ಸ್‌ನಲ್ಲಿ ಬಹಳ ಚೆನ್ನಾಗಿದ್ದಾರೆಂದು ಪ್ರಣಬ್ ಮುಖರ್ಜಿಯವರ ಕಡೆಯಿಂದ ಸರ್ಟಿಫಿಕೇಟನ್ನು ತಂದಿರಿ. ಇವತ್ತು ನೀವು ಈ ಬಡ ರೈತರಿಗೆ ರಿಯಾಯಿತಿಯನ್ನು ಕೊಡುವುದಕ್ಕೆ ಆಗಿಲ್ಲ ಎಂದರೆ ಬೇರೆ ಇನ್ನು ಯಾರಿಗೆ ನೀವು ರಿಯಾಯಿತಿ ಕೊಡುತ್ತೀರಿ? ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ಹೇಳುತ್ತೇನೆ, ರೈತರಿಗೆ ಈ ಸರ್ಕಾರದಿಂದ ಬಹಳ ದೊಡ್ಡ ಮೋಸವಾಗಿದೆ. ಮಾನ್ಯ ಮೊಯ್ಲಿಯವರು ರೈತರ ಪ್ರತಿನಿಧಿಯಾಗಿ ಇಲ್ಲಿಗೆ ಬಂದಿದ್ದಾರೆ; ಬಡ ಕುಟುಂಬದಲ್ಲಿ ಇವರು ಹುಟ್ಟಿಬಂದಿರುವುದರಿಂದ ರೈತರ ಕಷ್ಟವನ್ನು ತಿಳಿದುಕೊಂಡು ರೈತರಿಗೆ ನಿಜವಾಗಿಯೂ ರಿಯಾಯಿತಿಯನ್ನು ಕೊಡುತ್ತಾರೆ ಎಂದು ತಿಳಿದುಕೊಂಡಿದ್ದೆ. ಆದರೆ ಇವರು ನಬಾರ್ಡ್ ವಿಚಾರ, ರಿಸರ್ವ್ ಬ್ಯಾಂಕ್ ವಿಚಾರವನ್ನು ಇಲ್ಲಿ ಹೇಳುತ್ತಾರೆ. ನನಗೆ ತಿಳಿದಮಟ್ಟಿಗೆ ನಬಾರ್ಡಿಯವರು, ರಿಸರ್ವ್ ಬ್ಯಾಂಕ್‌ನವರು ಕಳೆದ 10 ವರ್ಷಗಳಿಂದ ಇದೇ ಮಾತನ್ನು ಹೇಳುತ್ತಿದ್ದಾರೆ. ಬ್ಯಾಂಕ್‌ಗಳು ಎಲಿಜಿಬಿಲಿಟ್ ಇಲ್ಲವೆಂದು ತಾವು ಹೇಳಿದಾಗ ನಾನು ಹೇಳಿದೆ, ನೀವು ಈ ರಿಯಾಯಿತಿಯನ್ನು ರೈತರಿಗೆ ಕೊಟ್ಟರೆ ಹಣ ವಸೂಲಾತಿಯಾಗುತ್ತದೆ, ಹಣದ ವಸೂಲಾತಿಯಾದರೆ ಬ್ಯಾಂಕುಗಳಿಗೆ ಎಲಿಜಿಬಿಲಿಟಿ ಬರುತ್ತವೆ. ಬ್ಯಾಂಕುಗಳಿಗೆ ಎಲಿಜಿಬಿಲಿಟಿ ಬಂದರೆ ಲೋನ್ ಕೊಡುವುದು ಹೆಚ್ಚಾಗುತ್ತದೆ. 31 ಪರ್ಸೆಂಟ್ ಹಣವನ್ನು ರೈತರಿಗೆ ಸಾಲ ಕೊಟ್ಟಿದ್ದೇವೆಂದು ತಾವೇ ಹೇಳಿದಿರಿ. 31ರಿಂದ 25 ಪರ್ಸೆಂಟ್ ಪಾರ್ಟ್‌ಟೈಮ್ ಲೋನನ್ನು ಕೊಟ್ಟಿದ್ದೀರಿ; ಲಾಂಗ್ ಟರ್ಮ್‌ಲೋನ್‌ನಲ್ಲಿ 16 ಪರ್ಸೆಂಟ್ ಕೂಡ ರಿಕವರಿ ಆಗಿಲ್ಲ. ಕಾರಣ ಬ್ಯಾಂಕುಗಳು ತಮ್ಮ ಎಲಿಜಿಬಿಲಿಟಿಯನ್ನು ಕಳೆದುಕೊಂಡು ಬಿಟ್ಟಿವೆ. ಇವತ್ತು ಸ್ಟೇಟ್ ಬ್ಯಾಂಕುಗಳು, ಡಿ.ಸಿ.ಸಿ. ಬ್ಯಾಂಕುಗಳು, ಪ್ರೈವೇಟ್ ಬ್ಯಾಂಕುಗಳು ಎಲಿಜಿಬಿಲಿಟಿಯನ್ನು ಕಳೆದುಕೊಂಡಿವೆ. ನಾನು ಹೇಳಿದಂತೆ ತಾವು ಇವತ್ತು ರೈತರಿಗೆ ಬಡ್ಡಿ, ಚಕ್ರಬಡ್ಡಿಗಳನ್ನೆಲ್ಲಾ ಮನ್ನಾಮಾಡಿದ್ದಿದ್ದರೆ ಸುಮಾರು 400 ಕೋಟಿ ರೂ.ವರೆಗೆ ಹಣ ವಸೂಲಾಗುತ್ತಿತ್ತು. ಎಲ್ಲ ಬ್ಯಾಂಕ್‌ಗಳಿಗೂ ಎಲಿಜಿಬಿಲಿಟಿ ಬರುತ್ತಿತ್ತು. ಆ ಮೂಲಕ ಮತ್ತೆ ಎಲ್ಲ ರೈತರಿಗೂ ಹೊಸದಾಗಿ ಸಾಲ ಸಿಕ್ಕುತ್ತಿತ್ತು.

ರೈತರಿಗೆ ಇನ್ನೂ ಹೆಚ್ಚಿನ ಅನುಕೂಲವಾಗುತ್ತಿತ್ತು. ಯಾರಿಗೆ ಸಾಲ ಸೌಲಭ್ಯ ಸಿಕ್ಕಿಲ್ಲ ಅವರಿಗೆ ಹೆಚ್ಚು ಕವರೇಜ್ ಆಗುತ್ತಿತ್ತು. ಆದುದರಿಂದ ರೈತರ ಅಧಿಕ ಪರಿಸ್ಥಿತಿ ಸುಧಾರಿಸುತ್ತಿತ್ತು; ಅಗ್ರಿಕಲ್ಚರ್ ಪ್ರೊಡೆಕ್ಷನ್ ಹೆಚ್ಚಾಗುತ್ತಿತ್ತು. ಅಗ್ರಿಕಲ್ಚರ್ ಪ್ರೊಡಕ್ಷನ್

ಹೆಚ್ಚಾಗಿ ಇವತ್ತು ರೈತರಿಗೂ ಅನುಕೂಲವಾಗುತ್ತಿತ್ತು ಮತ್ತು ಸರ್ಕಾರಕ್ಕೆ ರೆವಿನ್ಯೂ ಹೆಚ್ಚು ಬರುತ್ತಿತ್ತು. ತಾವು ಹೇಳಿದ ಹಾಗೆ ರೈತರಿಗೆ ರಿಯಾಯಿತಿ ಕೊಟ್ಟಿದ್ದರೆ ಪುನಃ ನಿಮಗೆ ಹಣ ವಾಪಸ್ ಬರುತ್ತಿತ್ತು. ಟ್ರೇಡ್‌ನಿಂದ ಮತ್ತು ಸೇಲ್ಸ್‌ಟ್ಯಾಕ್ಸ್‌ನಿಂದ ಹಣ ಬರುತ್ತಿತ್ತು. ನನಗೆ ಧರಣಿಗಿರಣಿ ಮಾಡಿ ಕಷ್ಟಪಡಬೇಕೆಂಬ ಇಚ್ಛೆ ಇಲ್ಲ. ನೀವು ಒಳ್ಳೆಯ ಕೆಲಸವನ್ನು ಮಾಡಿ ನೀವೇ ಅಧಿಕಾರಕ್ಕೆ ಬನ್ನಿ, ನೀವು ರೈತರಿಗೆ ಒಳ್ಳೆಯ ಕೆಲಸ ಮಾಡಿ ನೀವೇ ಚುನಾವಣೆಯಲ್ಲಿ ಆರಿಸಿ ಬನ್ನಿ ಎಂದು ನಾನು ಹಿಂದೆ ಕೂಡ ಹೇಳಿದ್ದೆ. ನಮ್ಮದೇನೂ ತಕರಾರು ಇಲ್ಲ. ಆದರೆ ಆ ಕೆಲಸ ನೀವು ಮಾಡಲಿಲ್ಲ. ಹಾಗಾಗಿ ತಾವು ಇಲ್ಲಿ ಬಂದು ಕುಳಿತುಮೇಲೆ ಯಾವ ಯಾವ ಸಂಶಯವೂ ಉಳಿದಿಲ್ಲ. ಹಾಗಾಗಿ ನಮ್ಮ ಕೆಲವು ಮಾನ್ಯ ಸ್ನೇಹಿತರು ಮಾತನಾಡುತ್ತಾರೆ, ನಮ್ಮ ಪಕ್ಷದಿಂದ ಏನು ಹೇಳುತ್ತಾರೋ ಹೇಳಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇವತ್ತು ಕರ್ನಾಟಕ ರಾಜ್ಯದ ರೈತರ ದೃಷ್ಟಿಯಿಂದ ಅತ್ಯಂತ ಕರಾಳದಿನವಾಗಿದೆ. ಇವತ್ತಿನದಿವಸ ಏತಕ್ಕಾದರೂ ಕೂಡ ಈ ಶನಿಸರ್ಕಾರ ಇಲ್ಲಿದೆ ಎಂದು ಕೇಳಬೇಕಾಗಿದೆ. ಮದ್ಯಾಹ್ನಕ್ಕೆ ಎಲ್ಲಾ ಅಂಕಿಅಂಶಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ; ಅಂದರೆ ರೈತರು ಬೆಳೆದ ಉತ್ಪನ್ನವೆಲ್ಲ ಏನಾಗಿದೆ ಎನ್ನತಕ್ಕಂಥದ್ದರ ಬಗ್ಗೆ ಭೂಮಿಯಿಂದ ಬೆಳೆಯುತ್ತಿರುವ ಉತ್ಪನ್ನಗಳ ಬೆಲೆ ಪಾತಾಳಕ್ಕೆ ಹೋಗುತ್ತಿದೆ. ಆದರೆ, ರೈತ ಕೊಂಡುಕೊಳ್ಳಬೇಕಾದ ವಸ್ತುಗಳ ಬೆಲೆ ಆಕಾಶ ಮಿಾರಿ ಹೋಗುತ್ತಾ ಇದೆ. ಈ ಬಗ್ಗೆ ಬೆಳಿಗ್ಗೆ ಅಂಕಿಅಂಶಗಳನ್ನು ಕೊಟ್ಟು ಹೇಳಿದ್ದೇನೆ. ನಾವು ಅವರಿಗೆ ಒಳ್ಳೆಯ ಮಾತಿನಲ್ಲಿ ಕೇಳಿಕೊಂಡಿದ್ದೇವೆ. ಅತ್ಯಂತ ಧೈನ್ಯದಿಂದ ಹೇಳಿದ್ದೇವೆ, ಎಲ್ಲರೂ ಕೂಡ ಒಂದೊಂದು ದಾರಿಯಲ್ಲಿದ್ದರೂ ಕೂಡ ಇವತ್ತಿನ ದಿವಸ ನಾವೆಲ್ಲರೂ ಒಂದೇ ಮಾತಿನಿಂದ ಹೇಳಿದ್ದೇವೆ. ಇವತ್ತಿನ ದಿವಸ ಕೊನೆಯ ಪಕ್ಷ ನೀವು ಬಡ್ಡಿ ಮತ್ತು ಸುಸ್ತಿಬಡ್ಡಿಯನ್ನಾದರೂ ವಜಾ ಮಾಡಿ ಎನ್ನತಕ್ಕಂಥ ಮಾತನ್ನು ಹೇಳಿದ್ದೇವೆ. ನಿಮಗೆ ಕನಿಕರ ಬರಲಿಲ್ಲ. ಇದರಿಂದಾಗಿ ನಿಮ್ಮ ಅವನತಿ ಇವತ್ತಿನಿಂದ ಪ್ರಾರಂಭವಾಗಬೇಕು. ಈ ಶನಿಸರ್ಕಾರ ಹೋಗಬೇಕು. ನೀವು ಶನಿಗ್ರಹವಾಗಿ ವಕ್ರಿಸಿದ್ದೀರಿ ಈ ರಾಜ್ಯಕ್ಕೆ ಈ ಕರ್ನಾಟಕ ರಾಜ್ಯದ ರೈತರಿಗೆ ಇವತ್ತು ಅತ್ಯಂತ ಕರಾಳದಿವಸದ ಎಂದು ಹೇಳತಕ್ಕಂಥದ್ದನ್ನು ರಾಜ್ಯದ ರೈತರು ಸಹಿಸುವುದಕ್ಕೆ ಸಾಧ್ಯವೇ ಇಲ್ಲ. ನಾನು ಬಹಳ ಆಸೆಯನ್ನಿಟ್ಟುಕೊಂಡಿದ್ದೆ. ತಾವು ಅನೇಕ ಉತ್ತಮ ಕೆಲಸಗಳನ್ನು ಮಾಡಿರತಕ್ಕಂಥದ್ದನ್ನು ನಾನು ಮುಕ್ತಕಂಠದಿಂದ ಹೊಗಳಿದ್ದೇನೆ. ಇದನ್ನು ರೈತರಿಗೆ ಕೊಡುವುದಕ್ಕೋಸ್ಕರನೇ ನನ್ನಿಂದ ನೀವು ಇವತ್ತಿನದಿವಸ ಹೊಗಳಿಕೆಯನ್ನು ಪಡೆದಿದ್ದು ಏನು ಅನ್ಯಾಯ ಮಾಡಿದ್ದಾರೆ ಕರ್ನಾಟಕ ರಾಜ್ಯದ ರೈತರು ನಿಮಗೆ? ನಿಮ್ಮನ್ನು ಕರ್ನಾಟಕ ರಾಜ್ಯದ ರೈತರು ಅಧಿಕಾರಕ್ಕೆ ತಂದು ಕುಳಿಸಿದ್ದು ಅನ್ಯಾಯವೇ? ಪರಿಸ್ಥಿತಿ ಏನಾಗಿದೆ ಇವತ್ತಿನ ದಿವಸ ಅಂದರೆ, ಯಾವ ಬ್ಯಾಂಕಿಗೂ, ಯಾವ ಸಹಕಾರಿ ಸಂಘಕ್ಕೂ ಯಾವುದೇ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಅವು ಹಾಳಾಗಿ ಹೋಗಲಿ, ಆದರೆ ರೈತರು ಇವತ್ತಿನ ದಿವಸ ನೆಲಕಚ್ಚಿ ಪಾತಾಳಕ್ಕೆ ಹೋಗುತ್ತಿದ್ದಾರೆ. ಅದು ನಿಮ್ಮ ಗಮನದಲ್ಲಿಲ್ಲವೇ? ನಾನು ಒಬ್ಬನೇ ಇವತ್ತಿನದಿವಸ ರೈತನಾಗಿ, ಮಾತನಾಡುತ್ತಿಲ್ಲ; ಆಕಡೆ ಕುಳಿತಿರತಕ್ಕಂಥವರೆಲ್ಲ ರೈತರ ಮಕ್ಕಳಾಗಿ ತಾವು ಕುಳಿತಿದ್ದೀರಿ. ಮಂತ್ರಿಗಳಾಗಿರತಕ್ಕಂಥವರು ಅನೇಕರು ರೈತರಾಗಿದ್ದೀರಿ. ನಿಮಗೆ ಈ ರೀತಿ ಏನು ಅನಿಸಲಿಲ್ಲವೇ? ಯಾವ ರೀತಿ ಇದನ್ನು ಒಪ್ಪುತ್ತಿದ್ದೀರಿ. ಇದಕ್ಕೆ ಯಾವ ಅಧಿಕಾರವಿದೆ;

ಯಾವುದೇ ವೈಜ್ಞಾನಿಕವಾದ ಆಧಾರವಿದೆಯೇ ಇದನ್ನು ಒಪ್ಪಲಿಕ್ಕೆ? ನಾವು ಎಷ್ಟು ವಿಶ್ವಾಸವನ್ನು ಈ ಸರ್ಕಾರದ ಮೇಲೆ ಇಟ್ಟಿದ್ದೇವೋ ಅಷ್ಟು ವಿಶ್ವಾಸಭಂಗ ಇವತ್ತಿನದಿವಸ ಆಗಿದೆ. ವೈಯುಕ್ತಿಕವಾಗಿ ನನಗೆ ಬಹಳ ಆಶೆ ಇತ್ತು ; ಏನೋ ಈ ಸರ್ಕಾರದವರು ಮಾಡುತ್ತಾರೆಂದು. ಆ ವೈಯುಕ್ತಿಕವಾದ ವಿಶ್ವಾಸ ಅಭಿಮಾನ ಏನಿತ್ತೋ ಅದು ಇಂದು ಇಲ್ಲದಂತಾಗಿದೆ. ಏನೋ ಬೆಟ್ಟ ಅಗೆದಿದ್ದೇವೆ; ಕೊನೆ ಪಕ್ಷ ಇಲಿಯಾದರೂ ಸಿಗುತ್ತದೆಂದು ತಿಳಿದುಕೊಂಡಿದ್ದೆವು. ಇಲಿಯೂ ಇಲ್ಲ, ಇಲಿ ಬಾಲವೂ ಕೂಡ ಸಿಕ್ಕಲಿಲ್ಲ. ಈ ಸರ್ಕಾರ ಸರ್ವನಾಶವಾಗಿದೆ. ಇದು ಸರ್ವನಾಶವಾಗಲಿ ಎಂದು ಹೇಳಿ ನಾನು ಹೊರಗಡೆ ಹೋಗುತ್ತೇನೆ.

(ಮಾನ್ಯ ಸದಸ್ಯರಾದ ಸಿ. ಬೈರೇಗೌಡರು ಸಭಾತ್ಯಾಗ ಮಾಡಿದರು.)

ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಗುಲ್ಬರ್ಗಾ, ಬೀದರ್ ಮತ್ತು ರಾಯಚೂರಿಗೆ ಸಂಬಂಧಪಟ್ಟಂತೆ 10 ಕೋಟಿ ರೂಪಾಯಿಗಳ ಪರಿಹಾರ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಎರಡೂವರೆ ಕೋಟಿ ರೂಪಾಯಿಗಳನ್ನು ಸಣ್ಣ ರೈತರಿಗೆ ಮಾತ್ರ ಕೊಟ್ಟಿದ್ದಾರೆ. ಮತ್ತೊಂದು ಯೋಜನೆಯ 12 ಕೋಟಿ ರೂಪಾಯಿಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಗೊಬ್ಬರ ಮತ್ತು ಔಷಧಿಗಳನ್ನು ಕೊಡಲಿಕ್ಕೆ ಕೊಟ್ಟಿದ್ದಾರೆ. ಇದು ಸಾಕೇ ಸ್ವಾಮಿ? ತಮಗೆ ನಾಚಿಕೆಯಾಗಬೇಕು. ಯಾವಾಗಲೂ ಸರ್ಕಾರ ರೈತರ ಪರವಾಗಿದೆ ಎಂದು ಹೇಳಿಕೊಂಡಿದ್ದಾರೆ; ಯಾವ ಒಂದು ಸರ್ಕಾರ 8000 ಕೋಟಿ ರೂಪಾಯಿಗಳನ್ನು ಇವತ್ತಿನದಿವಸ ಖರ್ಚುಮಾಡುತ್ತಿದೆ, ಯಾವ ಒಂದು ಸರ್ಕಾರ ನೂರಾರು ಕೋಟಿ ರೂಪಾಯಿಗಳನ್ನು ದೊಡ್ಡ ದೊಡ್ಡ ಬಂಡವಾಳದಾರರಿಗೆ ಸಹಾಯಧನವನ್ನಾಗಿ ಕೊಡುತ್ತಿದೆ, ಅಂಥ ಸರ್ಕಾರ ರೈತರಿಗೆ ಕೊಟ್ಟಿರತಕ್ಕಂಥದ್ದನ್ನು ನೋಡಿದರೆ ನಾಚಿಕೆಪಡಬೇಕಾಗಿದೆ. ಎಂದೂ ಈ ರೀತಿ ತಾವು ವರ್ತನೆ ಮಾಡಿರಲಿಲ್ಲ. ಈ ಸರ್ಕಾರ ಏನಿದೆ ಇದಕ್ಕೆ ನಾಚಿಕೆಯಾಗಬೇಕು. ಇದಕ್ಕಿಂತ ನಾಚಿಗೆಗೆಟ್ಟ ಸರ್ಕಾರ, ಇದಕ್ಕಿಂತ ದೊಡ್ಡ ದೊಡ್ಡ ಬಂಡವಾಳಶಾಹಿಗಳ ಪರವಾಗಿರುವ ಸರ್ಕಾರ ಇಂತಹ ನೀತಿಯನ್ನು ಹೊಂದಿರತಕ್ಕಂಥ ಸರ್ಕಾರ ಈ ದೇಶದಲ್ಲಿ ಇರಲಿಕ್ಕೆ ಸಾಧ್ಯವೇ ಇಲ್ಲ. ಇದು ರಿಯಾಯತಿಯಲ್ಲ ಸ್ವಾಮಿ; ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ದೊಡ್ಡ ದೊಡ್ಡ ಬಂಡವಾಳ ಶಾಹಿಗಳಿಗೆ ನೀವು ಉತ್ತೇಜನ ಕೊಡುತ್ತಿದ್ದೀರಿ; ಇವತ್ತಿನ ದಿವಸ ಯಾರು ಕೊಟ್ಯಾಂತರ ರೂಪಾಯಿಗಳ ಬಾಕಿ ನಿಲ್ಲಿಸಿಕೊಂಡಿದ್ದಾರೆ, ಅಂತಹ ಅಬಕಾರಿಯವರಿಗೆ ಬಡ್ಡಿಯನ್ನು ಬಿಡಬೇಕೆಂದು ಹೇಳುತ್ತಿರುವಿರಲ್ಲಾ, ಅದು ರಿಯಾಯಿತಿನಾ? ಕೇವಲ ವ್ಯಕ್ತಿಗಳಿಗೇ ನೀವು ಸಹಾಯ ಮಾಡುತ್ತಿದ್ದೀರಿ. ಒಂದು ವರ್ಗಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡುತ್ತಿದ್ದೀರಿ ಎನ್ನುವ ಮಾತನ್ನು ಹೇಳಬೇಕಾಗಿದೆ. ನಿಮ್ಮದು ರೈತವಿರೋಧ ನೀತಿ; ನಿಜವಾಗಿಯೂ ಸಹ ಯಾರು ಗ್ರಾಮೀಣ ಪ್ರದೇಶದ ಜನ, ಯಾರು ದಲಿತರೆಂದು ಹೇಳುತ್ತಾರೆ, ಯಾರು ಶೋಷಿತರೆಂದು ಹೇಳುತ್ತಾರೆ, ಅವರಿಗೆ ಅನ್ಯಾಯವಾಗಿದೆ. ಇವತ್ತಿನ ದಿವಸ ರೈತರು ಬೆಳೆದಂಥ ಬೆಳೆಗಳಿಗೆ ನ್ಯಾಯವಾದಂಥ ಬೆಲೆ ಇಲ್ಲ. ರೈತರು ಉಪಯೋಗಿಸುವ ಗೊಬ್ಬರಕ್ಕೆ ಹೆಚ್ಚಿನ ಬೆಲೆ ಕೊಡಬೇಕಾಗಿದೆ. ರೈತರು ಉಪಯೋಗಿಸುವ ಸಾಮಾನುಗಳಿಗೆ, ಔಷಧಿಗಳಿಗೆ ಇವತ್ತಿನ ದಿವಸ ಹೆಚ್ಚಿನ ಹಣ ಕೊಡಬೇಕಾಗಿದೆ. ಆದರೆ ನಾವು

ಬೆಳೆದಂತಹ ಬೆಲೆಗಳಿಗೆ ನ್ಯಾಯವಾದ ಬೆಲೆ ಕೊಡುವುದಕ್ಕೆ ಅವರಿಂದ ಸಾಧ್ಯವಿಲ್ಲ. ಲಾಭದಾಯಕವಾದ ಬೆಳೆ ಇರಲಿ, ಯಾವುದೇ ಇರಲಿ, ಈ ಹಿನ್ನೆಲೆಯಲ್ಲಿ ರೈತರಿಗೆ ಸಹಾಯ ಮಾಡಬೇಕಾದುದು ಅವಶ್ಯಕ. ಇವತ್ತು ಏನು ಪರಿಹಾರ ಕೊಟ್ಟಿದ್ದಾರೆ, ಇದು ಕೇವಲ ಸಮುದ್ರಕ್ಕೆ ಒಂದು ಹನಿ ನೀರು ಇದ್ದ ಹಾಗೆ. ಆದುದರಿಂದ ಈ ನೀತಿಯನ್ನು ವಿರೋಧ ಮಾಡಬೇಕಾಗಿದೆ ಎಂದು ಹೇಳುತ್ತೇನೆ. ಇದನ್ನು ಎಲ್ಲರೂ ಸಾಮೂಹಿಕವಾಗಿ ವಿರೋಧ ಮಾಡಬೇಕೆಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ನಾನು ಬಹಳ ನೊಂದ ಮನಸ್ಸಿನಿಂದ ಈ ಸರ್ಕಾರ ರೈತ ವಿರೋಧಿ ಸರ್ಕಾರ ಇದೆ ಎಂದು ಹೇಳಬೇಕಾಗಿದೆ. ಇದರಿಂದ ನನಗೆ ಸಮಾಧಾನ ಇಲ್ಲ. ಆದಕಾರಣ ನಾವೆಲ್ಲರೂ ಕೂಡ ಧರಣಿ ಮಾಡಬೇಕಾಗಿದೆ.

(ವಿರೋಧ ಪಕ್ಷದ ಮಾನ್ಯ ಸದಸ್ಯರು ಧರಣಿ ಮಾಡಿದರು.)

ಶ್ರೀ ಜೆ. ಸಿ. ಮಾಧುಸ್ವಾಮಿ : ಇಂಥ ಸರ್ಕಾರಗಳನ್ನು ನಾವು ಇದುವರೆಗೆ ನೋಡಿರಲಿಲ್ಲ. ಮಾನ, ಮರ್ಯಾದೆ, ಲಜ್ಜೆ ಏನೂ ಇಲ್ಲದ ಸರ್ಕಾರ ಇದು .....
(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್ : ಇದು ರೈತ ವಿರೋಧಿ ಸರ್ಕಾರ, ಇದು ರೈತರನ್ನು ವಂಚಿಸುವ ಸರ್ಕಾರ .....
(ಗೊಂದಲ)

ಅಧ್ಯಕ್ಷರು : ಅದು ಯಾವುದೂ ರೆಕಾರ್ಡಿಗೆ ಹೋಗತಕ್ಕದ್ದಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಸಣ್ಣ ರೈತರಿಗೆ ರಿಯಾಯಿತಿ ಕೊಡುತ್ತೇವೆಂದು ಏನು ಹೇಳಿದ್ದಾರೆ, ಅದನ್ನು ಎಲ್ಲಾ ರೈತರಿಗೆ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ನೋಡಿ, ಎಲ್ಲಾ ರೈತರಿಗೆ ಕೊಟ್ಟಿದ್ದೇವೆ.

ಶ್ರೀ ಬಸವರಾಜ ರಾಯರೆಡ್ಡಿ : ನಾನು ನೋಡಿದ್ದೇನೆ.
(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ : ರೈತರು ಸಾಲ ಪಡೆಯಲು ಮಾರ್ವಾಡಿ ಮನೆಗೆ ಹೋಗಬೇಕು. ಆ ತಂತ್ರ ನಿಮ್ಮದು.
(ಗೊಂದಲ)

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ರೈತನನ್ನು ಉದ್ಧಾರ ಮಾಡುವುದಕ್ಕೆ ಬಹಳ ಉತ್ಸಾಹ ಎಲ್ಲಾ ಕಡೆಯಿಂದ ಕಂಡುಬರುತ್ತಿದೆ. ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಇರಲಿಲ್ಲ, ಕೃಷಿ ಮಂತ್ರಿಗಳೂ ಇರಲಿಲ್ಲ. ಆಗ ಬೈರೇಗೌಡರು

ಕೃಷಿ ಮಾರುಕಟ್ಟೆ ಫೆಡರೇಷನ್‌ನಿಂದ ಈ ವರ್ಷದ ಬೆಲೆಗಳ ವಿವರಗಳನ್ನು ತಂದು ಹೇಳಿದರು. ಇದನ್ನು ಏತಕ್ಕೆ ನೆನಪು ಮಾಡುತ್ತಿದ್ದೇನೆಂದರೆ ಮುಖ್ಯಮಂತ್ರಿಗಳ ಹೇಳಿಕೆ ಪ್ರಕಾರ 1989-90ನೇ ಸಾಲಿನಲ್ಲಿ ವಸೂಲಾತಿ ಪ್ರಮಾಣ ಅಲ್ಪಾವಧಿ ಸಾಲದ್ದು ಶೇಕಡ 18.6 ಆದರೆ ಮಧ್ಯಮಾವಧಿ ಸಾಲದ ವಸೂಲಾತಿ ಪ್ರಮಾಣ ಶೇಕಡ 9.24, ದೀರ್ಘಾವಧಿ ಸಾಲದ ವಸೂಲಾತಿ ಪ್ರಮಾಣ ಶೇಕಡ 24 ಎಂದು ಹೇಳಿದ್ದಾರೆ. ಬೆಳಿಗ್ಗೆ ಬೈರೇಗೌಡರು 1989-90ರಲ್ಲಿ ರೈತ ಬೆಳೆದ ಬೆಳೆಗಳಿಗೆ ಯಾವ ಯಾವ ಬೆಲೆ ಇತ್ತು ಎಂಬ ವಿವರವನ್ನು ಕೊಟ್ಟರು. 1991-92ರಲ್ಲಿ ರೈತ ಬೆಳೆದ ಅದೇ ಬೆಳೆಗಳಿಗೆ ಏನು ಬೆಲೆಗಳು ಇದ್ದವು ಎಂಬುದನ್ನು ಹೇಳಿದರು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ತಾವು ಸಾಲ, ಬಡ್ಡಿ, ಸುಸ್ತಿ ಬಡ್ಡಿ ಎಲ್ಲಾ ಕಟ್ಟಿದ ಮೇಲೆ ನೀವು ಶೇಕಡಾ 5 ರಂತೆ ಬಡ್ಡಿಯನ್ನು ಉತ್ಪಾದನಾ ಉತ್ತೇಜಕ ಯೋಜನೆಯಾಗಿ ಕೊಡುತ್ತೇವೆಂದು ಹೇಳುತ್ತಿದ್ದೀರಿ. 1989-90ರ ಬೆಲೆ ಏನಿತ್ತು ಅದರ ಶೇಕಡಾ 40 ಭಾಗ ಈ ವರ್ಷ ಬೆಲೆ ಕಡಿಮೆ ಆಗಿದೆ. ಜೊತೆಗೆ ಉತ್ಪಾದನಾ ಕೂಡ ಕಡಿಮೆ ಆಗಿದೆ. ಸಬ್ಸಿಡಿ ತೆಗೆದ ಮೇಲೆ ರಸಗೊಬ್ಬರದ ಬೆಲೆ ಏರಿಕೆ ಆದಮೇಲೆ ರೈತನ ಉತ್ಪನ್ನ ಕಡಿಮೆಯಾಗಿದೆ. ಅವನು ಉತ್ಪತ್ತಿ ಮಾಡಿದ ವಸ್ತುವಿಗೆ ಬೆಲೆ ಕಡಿಮೆ ಆಗಿದೆ. ಎಂದರೆ ನಿಮ್ಮ ವಸೂಲಾತಿ ಎಷ್ಟರಮಟ್ಟಿಗೆ ಆಗಬಹುದು ಎಂದು ಸ್ವಲ್ಪ ಆಲೋಚನೆ ಮಾಡಿ. 1989-90 ಏನು ಪರ್ಸೆಂಟೇಜ್ ಆಫ್ ರಿಕವರಿ ಬಗ್ಗೆ ಹೇಳಿದ್ದೀರಿ, ಅದರ ಅರ್ಥ.....

ಶ್ರೀ ಜೆ. ಪಿ. ಮಾಧುಸ್ವಾಮಿ : (ಸದನದ ಬಾವಿಯಲ್ಲಿ ನಿಂತು) ನಯವಂಚನೆ ....

ಪ್ರೊ ಎಂ. ಡಿ. ನಂಜುಂಡಸ್ವಾಮಿ : ನಯವಂಚನೆಯ ಪ್ರಶ್ನೆ ಅಲ್ಲ. ನೀವು ನಯವಂಚನೆ ಎಂದು ಹೇಳುತ್ತೀರಿ. ನಾನು ಅವಿವೇಕಿತನ ಎಂದು ಹೇಳುತ್ತೇನೆ. ಅವಿವೇಕತನ ಎಲ್ಲಾ ಪಕ್ಷಗಳದ್ದು ಎಂದು ನಾನು ಹೇಳುತ್ತಿದ್ದೇನೆ. ನಾನೊಬ್ಬ ರೈತನಾಗಿ ಮಾತನಾಡುತ್ತಿದ್ದೇನೆ. ಇಲ್ಲಿ ನಾನು ರಾಜಕೀಯ ಮಾಡುತ್ತಾ ಇಲ್ಲ. How production is going down and how the prices are going down and how can you expect recovery of 5% of production incentive? This is a nonsensical document. You don't want to solve the problem. ದೇಶದಲ್ಲಿ ಇನ್ನೂ ಸಮಸ್ಯೆ ಹೆಚ್ಚು ಮಾಡುತ್ತೀರೋ ಹೊರತು ರೈತನಿಗೆ ನೀವೇನೂ ಬಗೆಹರಿಸುವುದಿಲ್ಲ. ಯಾರಾದರೂ ಅಷ್ಟೇ; ಸುಮ್ಮನೆ ಬಾವೀಲಿ ಹೋಗಿ ಕೂತರೂ ಅಷ್ಟೇನೇ; ವಾಕೌಟ್ ಮಾಡಿದರೂ ಅಷ್ಟೇನೇ. ಯಾವ ಅಧೋಗತಿಗೆ ಹೋಗುತ್ತಿದೆ ರೈತರ ಸ್ಥಿತಿಗತಿ ಎನ್ನುವುದನ್ನು ನೀವು ಗಂಭೀರವಾಗಿ ಆಲೋಚನೆ ಮಾಡುವ ಕ್ರಿಯೆ ಕಾಣಿಸುತ್ತಿಲ್ಲ ನಮಗೆ. ಉತ್ಪಾದನೆ ತೆಗೆದು ನೋಡಿ. Are we reaching our target this year? Have we reached our target last year? 180 ದಶಲಕ್ಷ ಟನ್‌ಗಳಷ್ಟು ಆಹಾರವನ್ನು ನಾವು ಉತ್ಪಾದನೆ ಮಾಡಬೇಕೆಂದು ಇದ್ದೇವೆ. We are not anticipating even reaching 170 million tonnes this year. What are you going to achieve in 2000 AD? What is your target? ಇಂತಹ ಅವಿವೇಕಿ ನೀತಿಗಳನ್ನು ಮಾಡಿಕೊಂಡು ನೀವು ರೈತರ

ಉದ್ದಾರ ಮಾಡುತ್ತೀರೇನು? I don't want to walk-out or I don't want to go to the well, I just want you to tell that idiots are ruling this country.

ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್) : ಸನ್ಮಾನ್ಯ ಅಧ್ಯಕ್ಷರೆ, ಬಹುಶಃ ಈ ಸರ್ಕಾರದಲ್ಲಿ ಗ್ರಾಮಾಂತರ ಪ್ರದೇಶದಿಂದ ಬಂದಂತಹವರೇ ಆಡಳಿತ ಮಾಡುತ್ತಿದ್ದಾರೆಂದು ನಾನು ಭಾವಿಸುತ್ತೇನೆ. ಆದರೆ ಇವರ ಮನೋಭಾವ ನೋಡಿದರೆ ಗ್ರಾಮಾಂತರ ಪ್ರದೇಶಕ್ಕೆ ಮಾರಕವಾಗು ನೀತಿಯನ್ನು ಅಳವಡಿಸುತ್ತಿದ್ದೀರಿ. ಒಂದು ವಾರದಿಂದ ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಏನಾದರೂ ಸಹಾಯ ಮಾಡಿ ನೌಕರಿಯಲ್ಲಿ ಮಿಾಸಲಾತಿ, ಶಾಲಾ ಕಾಲೇಜುಗಳಲ್ಲಿ ಸೇರುವುದಕ್ಕೆ ಸಹಾಯ ಮಾಡಿ ಎಂದು ಕೇಳಿದರೆ ಸಂಪೂರ್ಣವಾಗಿ ಮುಖ್ಯಮಂತ್ರಿಗಳು ಅದನ್ನು ತಿರಸ್ಕರಿಸಿದರು. ನಾವು ಈ ಸದನ ಶುರು ಆದಾಗಿನಿಂದಲೂ ರೈತರಿಗೆ ಸಹಾಯ ಮಾಡುತ್ತಾರೆ, ಸಹಾಯ ಮಾಡುತ್ತಾರೆ, ಸಹಾಯ ಮಾಡುತ್ತಾರೆಂದು ಕಾಯುತ್ತಿದ್ದೇವೆ. ಇವತ್ತು ಪ್ರೊಃ ನಂಜುಂಡಸ್ವಾಮಿಯವರು ಹೇಳಿದಹಾಗೆ ಈ ಆಹಾರ ಧಾನ್ಯಗಳ ಉತ್ಪತ್ತಿಯಲ್ಲಿ ಕೃಷಿ ಉತ್ಪಾದನೆಯಲ್ಲಿ ಆಗಿರುವ ಹಿಂಜಿಗಿತವನ್ನೇನಾದರೂ ಅವರು ಗಂಭೀರವಾಗಿ ಪರಿಗಣನೆ ಮಾಡದಿದ್ದರೆ ಮುಂದೆ ಅತ್ಯಂತ ಕೆಟ್ಟ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ಇವತ್ತು ಭೂಮಿ ಮೇಲಿನ ನೀರು ಪಾತಾಳ ಸೇರುತ್ತಿದೆ. ಆ ನೀರನ್ನು ಎತ್ತುವುದಕ್ಕೆ ವಿದ್ಯುತ್ ಕೊಡುವುದಕ್ಕೆ ಇವರಿಗೆ ಯೋಗ್ಯತೆ ಇಲ್ಲ. ಆದುದರಿಂದ ರೈತನಿಗೆ ಉತ್ಪಾದನೆ ಮಾಡುವುದಕ್ಕೆ ಯಾವುದೇ ವಿಧವಾದ ಸಹಾಯ ಸಿಗುತ್ತಾ ಇಲ್ಲ. ಈ ಒಂದು ಕೆಟ್ಟ ಸ್ಥಿತಿಯಲ್ಲಿ ರೈತರ ಸಹಕಾರಕ್ಕೆ ಬರಬೇಕಾದ ಈ ಸರ್ಕಾರ ವಿಫಲವಾಗಿದೆ ಮತ್ತು ಗ್ರಾಮಾಂತರ ಪ್ರದೇಶದ ನೋವು ನಲಿವಿಗೆ ಸ್ಪಂದಿಸಲಿಕ್ಕೆ ಈ ಸರ್ಕಾರ ವಿಫಲವಾಗಿದೆ. ನಾವು ಇದನ್ನು ವಿರೋಧಿಸುತ್ತೇವೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಿರ್ಣಯ (Ruling)

ವಿಷಯ : ಶ್ರೀ ಎಸ್. ಬಂಗಾರಪ್ಪನವರ ಹಕ್ಕುಚ್ಯುತಿ ಸಚನೆಗೆ ಅನುಮತಿ ನಿರಾಕರಣೆ.

ಶ್ರೀ ಎಸ್. ಬಂಗಾರಪ್ಪನವರು ದಿನಾಂಕ 8ನೇ ಏಪ್ರಿಲ್ 1993ರಂದು ನೀಡಿದ ಹಕ್ಕುಚ್ಯುತಿ ಸೂಚನೆಯ ಬಗ್ಗೆ ಮಾನ್ಯ ಸದಸ್ಯರ ಹಾಗೂ ಸರ್ಕಾರದವರ ವಿವರಣೆಯನ್ನು ಸವಿವರವಾಗಿ ಕೇಳಿದ ನಂತರ ಈ ಹಕ್ಕುಚ್ಯುತಿ ಯಾರ ವಿರುದ್ಧ ಇದೆಯೆಂಬುದು ಸ್ಪಷ್ಟವಾಗಿಲ್ಲದ ಕಾರಣ ಈ ಸೂಚನೆಗೆ ಅನುಮತಿಯನ್ನು ನಿರಾಕರಿಸಿದ್ದೇನೆ.

ಪ್ರಕಟಣೆ

(1) ವಿಧಾನ ಸಭೆಯ ವಿವಿಧ ಸಮಿತಿಗಳಿಗೆ ಸದಸ್ಯರುಗಳು ಚುನಾಯಿತ ಗೊಂಡಿರುವ ಬಗ್ಗೆ.

1993-94ನೇ ಸಾಲಿಗೆ ಕರ್ನಾಟಕ ವಿಧಾನಸಭೆಯ ವಿವಿಧ ಸಮಿತಿಗಳ ಸದಸ್ಯ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆ ಸಮಾನವಾಗಿ ನಾಮಪತ್ರವು ಬಂದಿರುವುದರಿಂದ ಈ ಕೆಳಗೆ ಸೂಚಿಸಿದ ವಿವಿಧ ಸಮಿತಿಗಳಿಗೆ ಈ ಕೆಳಕಂಡ ಮಾನ್ಯ ಸದಸ್ಯರುಗಳು ಚುನಾಯಿತರಾಗಿದ್ದಾರೆಂದು ಘೋಷಿಸಲಾಗಿದೆ.

ಸಾರ್ವಜನಿಕ ಲೆಕ್ಕ ಪತ್ರ ಸಮಿತಿ

ಶ್ರೀ ಹೆಚ್. ಏಕಾಂತಯ್ಯ
ಡಾ॥ ಎನ್. ಬಿ. ನಂಜಪ್ಪ
ಶ್ರೀ ಎ. ಬಿ. ಜಕನೂರು
ಶ್ರೀ ಆರ್. ಟಿ. ಪಾಟೀಲ್
ಶ್ರೀ ಸಾದತ್ ಆಲಿಖಾನ್
ಶ್ರೀ ಸಿ. ಎಂ. ಲಿಂಗಪ್ಪ
ಶ್ರೀ ಬಿ. ಎಸ್. ಪಾಟೀಲ್
ಶ್ರೀ ನಾರಾಯಣರಾವ್ ಮನೋಳ್ಳಿ
ಶ್ರೀ ಅಲ್ಲಂ ವೀರಭದ್ರಪ್ಪ
ಶ್ರೀ ಕೆ. ಭೀಮಣ್ಣ
ಡಾ॥ ಜೀವರಾಜ ಆಳ್ವ
ಶ್ರೀ ಕೆ. ಎಸ್. ಈಶ್ವರಪ್ಪ
ಶ್ರೀ ಸಿ. ಭೈರೇಗೌಡ

ಅಂದಾಜುಗಳ ಸಮಿತಿ

ಶ್ರೀ ಕೆ. ಹೆಚ್. ಹನುಮೇಗೌಡ
ಶ್ರೀ ಎಂ. ಮಹದೇವ್
ಶ್ರೀ ಯು. ಕೆ. ಶಾಮಣ್ಣ
ಶ್ರೀ ಉಮೇಶ್ ಭಟ್
ಶ್ರೀ ಎಂ. ಕೆ. ಕುಲಕರ್ಣಿ
ಶ್ರೀ ಎಸ್. ಕೆ. ದಾಸಪ್ಪ
ಶ್ರೀ ಎಸ್. ಬಿ. ಮಾಲಪಾಟೀಲ್
ಪ್ರೊ : ಎಂ. ಡಿ. ನಂಜುಂಡಸ್ವಾಮಿ
ಶ್ರೀ ಎನ್. ಟಿ. ಬೊಮ್ಮಣ್ಣ
ಶ್ರೀ ಜಿ. ರಾಜುಗೌಡ
ಡಾ॥ ಹೆಚ್. ಆರ್. ರಾಜು
ಶ್ರೀ ಎಂ. ಎಸ್. ಪಾಟೀಲ್
ಶ್ರೀ ಕೆ. ಎಂ. ಪಟ್ಟಣಶೆಟ್ಟಿ
ಶ್ರೀ ಅಶ್ವತ್ಥನಾರಾಯಣಶೆಟ್ಟಿ
ಶ್ರೀ ವಾಟಾಳ್ ನಾಗರಾಜ್

ಸಾರ್ವಜನಿಕ ಉದ್ದಿಮೆಗಳ ಸಮಿತಿ

ಡಾ॥ ಎ. ಮಲಕರೆಡ್ಡಿ
ಶ್ರೀ ಕಾಳಮರಿಗೌಡ
ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ
ಶ್ರೀ ಕೆ. ಹೆಚ್. ಕುರಡಗಿ.
ಶ್ರೀ ಬಿ. ಎಂ. ಇದಿನಬ್ಬ
ಶ್ರೀ ಎ. ಕೆ. ಅನಂತಕೃಷ್ಣ
ಶ್ರೀಮತಿ ರೇಣುಕಾರಾಜೇಂದ್ರ
ಶ್ರೀ ಬಸವರಾಜ ರಾಯರೆಡ್ಡಿ
ಶ್ರೀ ಬಿ. ಎಸ್. ಯಡಿಯೂರಪ್ಪ

ಸರ್ಕಾರಿ ಭರವಸೆಗಳ ಸಮಿತಿ

ಶ್ರೀ ಮಲ್ಲಾರಿ ಪಾಟೀಲ್
ಡಾ॥ ವೈ. ನಾಗಪ್ಪ
ಶ್ರೀ ಎಸ್. ಎಫ್. ಪಾಟೀಲ್
ಶ್ರೀ ಕರಿಯಣ್ಣ
ಶ್ರೀ ಸೋಮಪ್ಪ ಸುವರ್ಣ
ಶ್ರೀ ಬಿ. ಶಿವರಾಂ
ಶ್ರೀ ಜಿ. ಎಂ. ಕಾನಡೆ
ಶ್ರೀ ಬಿ. ಬಸವರಾಜ್